ಶ್ರೀ ವೀರೇಂದ್ರ ಪಾಟೀಲ್.—ಹೇಮಾವತಿ ಪ್ರಾಜೆಕ್ಟ್ ಷೆಡ್ಯೂಲ್ಡ್ ರಿವರ್ ಇರುವುದರಿಂದ ಅವರು ಹೇಳುವುದೇನೆಂದರೆ, ಈ ಪ್ರಾಜೆಕ್ಟ್ ಕಟ್ಟುವುದರಿಂದ ಫ್ಲೋ ಏನು ಬರುತ್ತದೆ ಅದು ಡಿಸ್ಟರ್ಬ್ ಆಗಬಾರದು—ಅಗ್ರಿಮೆಂಟ್ ಪ್ರಕಾರ—ಅಂತ ಇದೆ. ಅದೂ ಅಲ್ಲದೇ ಇಂಪೌಂಡಬಲ್ ಸರ್‌ಪ್ಲಸ್ ಏನು ಇರುತ್ತದೆ ಆ ನೀರನ್ನು ಪಡೆದುಕೊಳ್ಳುತ್ತೇವೆ ಎಂದರೆ ನಮ್ಮ ಸ್ಟೇಟ್ ಇಂಟರೆಸ್ಟ್‌ಗೆ ಧಕ್ಕೆ ಬರಬಹುದು ಎಂದು ಅವರಿಗೆ ಭಯ ಇರುವುದರಿಂದ ಅನೇಕ ಮಾಹಿತಿಗಳನ್ನು ಕೇಳುತ್ತಾ ಇದ್ದಾರೆ.

Strike by the Contractors of C.I.T.B

162. Sri M. S. KRISHNAN (Malleswaram).—

Will the Minister for Home and Municipal Administration be pleased to state :—

(*a*) whether it has come to the notice of the Government that there is a virtual strike by the Contractors of the City Improvement Trust Board, Bangalore and considerable amount of work has been held up ;

(*b*) whether the City Improvement Trust Board has been unable to give the needed facilities/amenities such as roads, drainage, etc., in some of the new lay-outs (particularly industrial sites in and around Bangalore) in time ;

(*c*) whether any steps are being taken or under contemplation to get the work done departmentally ?

A.—Sri R. M. PATIL (Minister for Home and Municipal Administration).—

(*a*) No.

(*b*) No.

(*c*) Not necessary.

ಶ್ರೀ ಎಂ. ಎಸ್. ಕೃಷ್ಣನ್.—ನಗರಾಭಿವೃದ್ಧಿಯ ಮಂಡಲಯ ಕಂಟ್ರಾಕ್ಟರುಗಳು ರಾಜಾಜಿನಗರ, ಯಶವಂತಪುರ ಇಂಡಸ್ಟ್ರಿಯಲ್ ಎಸ್ಟೇಟ್ ಮತ್ತು ಬನ್ನಮಂಗಲ ಇತ್ಯಾದಿ ಬಡಾವಣೆಗಳಲ್ಲಿ ರಸ್ತೆ ಕೆಲಸವನ್ನು ಬಿಲ್ ಕ್ಲಿಯರ್ ಮಾಡಿಲ್ಲವೆಂದು ನಿಲ್ಲಿಸಿ ಆರು ತಿಂಗಳಿಂದ ಒಂದು ವರ್ಷದವರೆಗೂ ಬಿಲ್ಲುಗಳನ್ನು ಕ್ಲಿಯರ್ ಮಾಡದಿರುವುದರಿಂದ ಅಲ್ಲಿ ಕುರ್ಚಿಯಿಂದ ಹಿಡಿದು ಟೇಬಲ್ ವರೆಗೂ ಲಂಚದ ತನ್ನಯವಾಗಿ ಅವರು ಕೆಲಸ ನಿಲ್ಲಿಸಿರತಕ್ಕದ್ದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಆರ್. ಎಂ. ಪಾಟೀಲ್.—ಅವರು ದೂರುಗಳನ್ನು ಕಳುಹಿಸಿದ್ದರು. ಅವುಗಳನ್ನು ವಿಚಾರಣೆ ಮಾಡಿದಾಗ ಅವರು ಕೊಟ್ಟಿದ್ದ ಕಾರಣಗಳು ಸಮಂಜಸವಾಗಿರಲಿಲ್ಲ. ಆದ್ದರಿಂದ ಅವುಗಳನ್ನು ನಿರಾಕರಿಸಲಾಯಿತು. ಈಗ ಅವರೇ ಮತ್ತೆ ಕೆಲಸವನ್ನು ಪ್ರಾರಂಭ ಮಾಡಿದ್ದಾರೆ. ಕೆಲಸ ನಡೆಯುತ್ತಿದೆ.

ಶ್ರೀ ಎಂ. ಎಸ್. ಕೃಷ್ಣನ್.—ಹಾಗೆ ಎಷ್ಟು ಜನ ಕಂಟ್ರಾಕ್ಟರ ಬಿಲ್ಲುಗಳು ಪೇಮೆಂಟ್ ಆಗದೆ ಆರು ತಿಂಗಳಿಗೆ ಮೇಲ್ಪಟ್ಟು ಒಂದು ವರ್ಷದ ವರೆಗೆ ಇರತಕ್ಕ ಬಿಲ್ಲುಗಳೆಷ್ಟು ?

ಶ್ರೀ ಆರ್. ಎಂ. ಪಾಟೀಲ್.—ಕೆಲವು ಕೆಲಸಗಳು ದೋಷಗಳಿಂದ ಕೂಡಿದ್ದವು. ಕೆಲವು ಕೆಲಸಗಳು ಸರಿಯಾಗಿದ್ದವು. ದೋಷಯುತವಾಗಿದ್ದ ಕೆಲಸವನ್ನು ಅವರು ಮತ್ತೆ ಸರಿ ಮಾಡಿಸಿ ಕೊಡುತ್ತಿದ್ದಾರೆ. ಕೆಲಸ ನಡೆಯುತ್ತಿದೆ.

Sri H. SIDDAVEERAPPA.—In answer to (*a*), (*b*) and (*c*) your reply is 'No', and now you say that they have restarted the work ? How is it?

ಶ್ರೀ ಆರ್. ಎಂ. ಪಾಟೀಲ್.—ಕೆಲವರು ಸರಿಯಾಗಿ ಮಾಡಿದ್ದಾರೆ. ಕೆಲವರು ಸರಿ ಮಾಡುತ್ತಿದ್ದಾರೆ. ಆದರೆ ಇಲ್ಲಿ ಸ್ಟೈಕ್ ಎಂಬ ಶಬ್ದ ಹತ್ತುವುದಿಲ್ಲ ಎನ್ನುವುದಕ್ಕಾಗಿ ಹಾಗೆ ಉತ್ತರವನ್ನು ಕೊಡಲಾಗಿದೆ.

ಶ್ರೀ ಎಂ. ಎಸ್. ಕೃಷ್ಣನ್.—ಕೆಲಸ ನಡೆಯುವುದಕ್ಕೆ ಇನ್ನೆಷ್ಟು ಕಾಲ ಬೇಕು ?

ಶ್ರೀ ಆರ್. ಎಂ. ಪಾಟೀಲ್.—ಕೆಲಸ ನಡೆಯುತ್ತಿದೆ. ನಿಂತಿಲ್ಲ.

Sri T. R. SHAMANNA.—There is a loud complaint regarding the rotten work done in the past. Is all the trouble due now because some strict enforcement is done regarding the checking of work done and all that ?

ಶ್ರೀ ಆರ್. ಎಂ. ಪಾಟೀಲ್.—ಅಲ್ಲಿ ಎರಡು ತರಹೇನೂ ಇದೆ. ಮೊದಲು ಸರಿಯಾದ ಮೇಲ್ವಿಚಾರಣೆ ಇಲ್ಲದೆ ಕೆಲವು ಕೆಲಸಗಳು ಸರಿಯಾಗಿ ನಡೆದಿರಲಿಲ್ಲ. ಈಗ ಸರಿಯಾದ ಮೇಲ್ವಿಚಾರಣೆ ಇರುವುದರಿಂದ ಕೆಲಸಗಳು ಸರಿಯಾಗಿ ನಡೆಯುತ್ತಿವೆ. ಮೊದಲಿನ ಹಾಗೆ ಕೆಲಸಗಳನ್ನು ಕೆಡಿಸುವುದಕ್ಕೆ ಈಗ ಅಸ್ಪದವಿಲ್ಲ.

ಶ್ರೀ ಪಾಟಾಳ್ ನಾಗರಾಜ್.—ಒಟ್ಟು ನಿಷ್ಣಾತ ಇಂಜಿನಿಯರನ್ನು ಬೆಂಗಳೂರು ನಗರಕ್ಕೆ ಕರೆಸಿಕೊಳ್ಳಲು ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡುವುದಕ್ಕೆ ಪ್ರಯತ್ನ ಪಟ್ಟರು. ಅವರು ಈಗ ಆ ಕೆಲಸದಲ್ಲಿ ಯಶಸ್ವಿಯಾಗಿದ್ದಾರೆ. ಅದರ ಬಗ್ಗೆ ತಮ್ಮ ಅಭಿಪ್ರಾಯವೇನು ?

ಶ್ರೀ ಆರ್. ಎಂ. ಪಾಟೀಲ್.—ಆ ಟ್ರಾನ್ಸ್‌ಫರ್ ಉದ್ಯೋಗವನ್ನು ನಾನು ಮಾಡುವುದಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಕೆಲವು ಕಂಟ್ರಾಕ್ಟ್‌ರು ಸರಿಯಾಗಿ ಕೆಲಸ ಮಾಡಿದ್ದರೂ ಅವರಿಗೆ ಬಿಲ್ಲುಗಳನ್ನು ಕೊಟ್ಟಿಲ್ಲ. ಇನ್ನು ಶ್ರೀ ಟಿ. ಆರ್. ಶಾಮಣ್ಣನವರು ಹೇಳಿದಂತೆ ಕೆಲಸವನ್ನು ಸರಿಯಾಗಿ ಮಾಡದಿದ್ದವರಿಗೂ ಕೊಟ್ಟಿಲ್ಲ. ಆದರೆ ಇಲಾಖೆಯವರೇ ಆ ಕೆಲಸಗಳನ್ನು ಮಾಡಿಸುವುದಕ್ಕೇನು ತೊಂದರೆ ಇದೆ ?

ಶ್ರೀ ಆರ್. ಎಂ. ಪಾಟೀಲ್.—ಅಲ್ಲಿ ಈಗ ಮೇಲ್ವಿಚಾರಣೆ ಸರಿಯಾಗಿರುವುದರಿಂದ ಅಲ್ಲಿ ಇಲಾಖೆಯವರು ಕೆಲಸವನ್ನು ಕೈಗೊಳ್ಳಬೇಕಾದ ಪ್ರಮೇಯವಿಲ್ಲ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡ್‌ನಲ್ಲಿ ಬಹಳ ಚೆನ್ನಾಗಿ ಕೆಲಸ ನಡೆಯುತ್ತಿದೆಯೆಂದು ಹೇಳಿದ್ದೀರಿ. ನಂಜಿಗೆಹಳ್ಳಿ ರೇ ಔಟ್, ಆರ್. ಗೋಪಾಲಸ್ವಾಮಿ ಅಯ್ಯಂಗಾರ್ ರೇ ಔಟ್, ಮತ್ತು ಜಬ್ಬಾರ್ ಬ್ಲಾಕ್ ರೇ ಔಟ್‌ಗಳಲ್ಲಿ ವರ್ಷಾನುಗಟ್ಟಲೆ ಕಂಟ್ರಾಕ್ಟರುಗಳು ಕೆಲಸಗಳನ್ನು ಮಾಡದೆ ಹಾಗೆಯೇ ಅಲ್ಲಿನ ಕೆಲಸ ಕಾರ್ಯಗಳು ನಿಂತು ಹೋಗಲು ಕಾರಣವೇನು ?

ಶ್ರೀ ಆರ್. ಎಂ. ಪಾಟೀಲ್.—ಅದಕ್ಕೆ ಕಾರಣ ಹೇಳುವುದಕ್ಕಿಂತ ಮೊದಲೇ ಈ ವಿಷಯವನ್ನು ತಿಳಿದುಕೊಳ್ಳಬೇಕಾಗುತ್ತದೆ. ಸದಸ್ಯರು ಏನಾದರೂ ಹೆಚ್ಚಿಗೆ ಮಾಹಿತಿ ಕೊಟ್ಟರೆ ಅಡ್ಡಿ ಇಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ನನ್ನ (ಅ) ಪ್ರಶ್ನೆಗೆ ಉತ್ತರವಾಗಿ 'ಇಲ್ಲ' ವೆಂದು ಉತ್ತರ ಹೇಳಿದ್ದೀರಿ. ತಮಗೇ ಗೊತ್ತಿರುವ ಹಾಗೆ ಬೆಂಗಳೂರು ಸುತ್ತಮುತ್ತ ಇರತಕ್ಕ ಡ್ರೈನೇಜ್, ರಸ್ತೆಗಳು ಸರಿಯಾಗಿಲ್ಲ; ನೀರು, ಲೈಟ್ ಏನೂ ಇಲ್ಲ. ಆದ್ದರಿಂದ ಇಲ್ಲರತಕ್ಕ 34 ಹಳ್ಳಿಗಳೂ ನಮಗೆ ಸೇರಿಕೊಂಡಿರುವುದರಿಂದ ಸರ್ಕಾರದವರು ಸುಮಾರು 10—15 ಲಕ್ಷ ರೂಪಾಯಿಗಳ ಗ್ರಾಂಟನ್ನು ಕೊಟ್ಟರೆ ಅದರಿಂದ ಜನಗಳಿಗೆ ಹೆಚ್ಚು ಅನುಕೂಲವಾಗುವುದಿಲ್ಲವೇ? ಅದನ್ನು ಪರಿಶೀಲನೆ ಮಾಡುತ್ತೀರಾ ?

ಶ್ರೀ ಆರ್. ಎಂ. ಪಾಟೀಲ್.—ಆ ವಿಷಯ ಹೀಗಿದೆ. ಯಾವ ಯೋಜನೆಯನ್ನು ಅವರು ತೆಗೆದುಕೊಂಡಿದ್ದಾರೋ ಅದನ್ನು ಯಶಸ್ವಿಯಾಗಿ ಮಾಡುತ್ತಿದ್ದಾರೆ. ಕೆಲವು ಯೋಜನೆಗಳನ್ನು ಆ ಹಳ್ಳಿಗಳಲ್ಲಿ ತೆಗೆದುಕೊಂಡಿಲ್ಲ. ಅದಕ್ಕಾಗಿ ಅಲ್ಲಿ ರಸ್ತೆಯಾಗಲೀ ಉಳಿದ ಸೌಲಭ್ಯಗಳು ಯಾವುದೇ ಆಗಲೀ ಇನ್ನೂ ಆಗಿಲ್ಲ. ಒಂದು ವಿಷಯವನ್ನು ಹೇಳಬಹುದು. ಸಿವಿಕ್ ಅಮೆನಿಟೀಸ್‌ನಲ್ಲಿ ಎಷ್ಟು ಜಾಗ ಬೇಕೋ ಅದನ್ನು ನೋಡುತ್ತಿದ್ದಾರೆ. ಶಾಲಾ ಕಟ್ಟಡಗಳಿಗೆ ಮತ್ತು ಇತರ ಸೌಲಭ್ಯಗಳಿಗೋಸ್ಕರ ಅಲ್ಲರತಕ್ಕ ರೇ ಔಟ್‌ಗಳಲ್ಲಿ ಜಾಗ ಇನ್ನೂ ಕೊಟ್ಟಿಲ್ಲವೆಂಬುದನ್ನು ಗಮನಕ್ಕೆ ತೆಗೆದುಕೊಂಡು

ಹೊಸದಾದ ಯೋಜನೆಗಳಲ್ಲಿ ವಿಶೇಷವಾಗಿ ಆಸ್ಥೆವಹಿಸಿ ಹೆಚ್ಚಿಗೆ ಅನುಕೂಲಗಳನ್ನು ಕೊಡುವ ವಿಷಯ ನಮ್ಮ ಗಮನದಲ್ಲಿದೆ.

ಶ್ರೀ ಎಂ. ಎಸ್. ಕೃಷ್ಣನ್.—ಆ 34 ಹಳ್ಳಿಗಳಲ್ಲಿ ನೀರು, ದೀಪ, ಕಕ್ಕಸು ಸೌಕರ್ಯವಿಲ್ಲದೇ ಇರುವುದರಿಂದ, ಸ್ಪೆಷಲ್ಲಾಗಿ 15 ಲಕ್ಷ ರೂಪಾಯಿಗಳ ಗ್ರಾಂಟನ್ನು ಕೊಡುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಆರ್. ಎಂ. ಪಾಟೀಲ್.—ಆ ಹಳ್ಳಿಗಳ ಬಗ್ಗೆ ಒಂದು ಕಾಂಪ್ರೆಹೆನ್ಸಿವ್ ಡೆವಲಪ್‌ಮೆಂಟ್ ಪ್ಲಾನ್ ಮಾಡಿದ್ದೇವೆ. ಆದರೆ ಸರ್ಕಾರದವರು ಸಾಲ ಕೊಡುತ್ತೇವೆಂದು ಹೇಳಿದರು. ಕಾರ್ಪೊರೇಷನ್ನಿನವರು ಅದಕ್ಕಾಗಿ ಗ್ರಾಂಟು ಕೊಡಬೇಕೆಂದು ನಿರ್ಣಯ ಮಾಡಿಕೊಂಡಿದ್ದರು. ಆ ವಾದ ಇನ್ನೂ ನಡೆಯುತ್ತಲೇ ಇದೆ. ಈ ವರ್ಷ ಹೆಚ್ಚಿಗೆ ಗ್ರಾಂಟು ಕೊಡುವುದಾಗಲೀ, ಕಾರ್ಪೊರೇಷನ್ನಿನವರು ಆ ಕೆಲಸಗಳನ್ನು ಮಾಡುವುದಾಗಲೀ ಯಾವುದೇ ನಿರ್ಣಯಕ್ಕೆ ಬರುವ ಎಚಾರವಿದೆ.

Foot Bridge across Tuddalli creek

163. **Sri M. M. JALISATGI** (Bhatkal).—

Will the Minister for Labour, Animal Husbandry, Fisheries and Sericulture be pleased to state :—

(*a*) whether the Government will arrange to have a foot bridge on the Tuddalli creek in between Balse and Mundeshwar of Bhatkal Taluk where hundreds of fishermen and women made through the creek day and night ;

(*b*) whether the fisheries road would be constructed along the shore between Bailure and Mundeshwar of Bhatkal Taluk ;

(*c*) whether a fisheries road be constructed along Doddagunda, Talmakki and Bolebasti hamlets of Manki Village in Honavar Taluk of North Kanara District joining West Coast High Way ?

A.— **Sri D. DEVARAJ URS** (Minister for Labour, Animal Husbandry Fisheries and Sericulture).—

(*a*) This is being examined.

(*b*) Will be examined.

(*c*) Will be examined.

ಶ್ರೀ ಎಂ. ಎಂ. ಜಾಲಿಸತ್ಗಿ.—ಈ ಕಾಮಗಾರಿಯ ಬಗ್ಗೆ ಇನ್ನೂ ಪ್ಲಾನ್ ಮತ್ತು ಎಸ್ಟಿಮೇಟ್ ತಯಾರಾಗದಿದ್ದರೆ, ಈ ವರ್ಷವಾದರೂ ಅದನ್ನು ಮಾಡುತ್ತೀರಾ ?

ಶ್ರೀ ಡಿ. ದೇವರಾಜ ಅರಸ್.—ರೋಕೋಪಯೋಗಿ ಶಾಖೆಯವರನ್ನು ಈ ವಿಚಾರನಲ್ಲಿ ಕೇಳಿದೆ. ಮುಂದಿನ ಬಜೆಟ್ಟಿನಲ್ಲಿ ಹಣ ಒದಗಿಸಿಕೊಂಡು ಈ ಕಾಮಗಾರಿಯನ್ನು ತೆಗೆದುಕೊಳ್ಳುತ್ತೇವೆಂದು ಆ ಇಲಾಖೆಯವರು ಸರ್ಕಾರಕ್ಕೆ ಬರೆದಿದ್ದಾರೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಈ ಪ್ರಶ್ನೆಯಲ್ಲಿ ಕೇಳಿರುವ ಪ್ರತಿಯೊಂದಕ್ಕೂ 'ಪರಿಶೀಲನೆಯಾಗುತ್ತದೆ' ಎಂಬುದಾಗಿ ಉತ್ತರ ಕೊಟ್ಟಿದ್ದೀರಿ. ಶ್ರಮಜೀವಿಗಳ ಹಾಗೂ ಬೆಸ್ತರ ಕಷ್ಟನಿವಾರಣೆಗೋಸ್ಕರ ನಿಮ್ಮ ಪರಿಶೀಲನೆಯನ್ನು ಕಾರ್ಯಗತ ಮಾಡುವುದು ಯಾವಾಗ ?

ಶ್ರೀ ಡಿ. ದೇವರಾಜ ಅರಸ್.—ಮುಂದಿನ ವರ್ಷವೆಂದು ಮೊದಲೇ ಹೇಳಿದೆ, ಸ್ವಾಮಿ.